5C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ. ನಂ. 115/2021 PW16

ದಿನಾಂಕ ಃ 03.07.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ.

**ಮುಂದುವರೆದ ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎನ್.ಎನ್. ವಕೀಲರಿಂದ ಃ**

1) ತನಿಖಾಧಿಕಾರಿಯವರು ಸಲ್ಲಿಸಿಕೊಂಡಿದ್ದ ನಿಪಿ.22 ಕೋರಿಕೆ ಪತ್ರವನ್ನು ನಾನು ಸ್ವೀಕರಿಸಿಕೊಂಡಿರಲಿಲ್ಲ. ನಿಪಿ.22 ರಲ್ಲಿ ಇರುವ ಸ್ವೀಕೃತಿ ಸಹಿ ನನ್ನದಲ್ಲ ಎಂದರೆ ಸರಿ. ನಿಪಿ.22 ಗಾಯಾಳುವಿನ ಹೇಳಿಕೆಯಲ್ಲಿ ಇರುವ ಡಾ. ರಾಜು ಎನ್ನುವ ಸಹಿ ನನ್ನದಲ್ಲ ಎಂದರೆ ಸರಿ. ಚಾಸಾ.2 ಸತೀಶ್ ಗಾಯಾಳುವಿನ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ದಾಖಲಿಸಿಕೊಳ್ಳುವ ಸಮಯದಲ್ಲಿ ನಾನು ಹಾಜರಿರಲಿಲ್ಲ ಎಂದರೆ ಸರಿ. ತನಿಖಾಧಿಕಾರಿ ಯವರು ಗಾಯಾಳು ಹೇಳಿಕೆ ಕೊಡುವ ಸ್ತಿತಿಯಲ್ಲಿ ಇದ್ದಾರಾ, ಇಲ್ಲವಾ ಎನ್ನುವುದನ್ನು ತಿಳಿದುಕೊಳ್ಳಲು ಯಾವುದೇ ಕೋರಿಕೆ ಪತ್ರವನ್ನು ನನಗೆ ಕೊಟ್ಟಿರಲಿಲ್ಲ ಎಂದರೆ ಸರಿ. ದಿಃ06.06.2020 ರಂದು ಸಂಜೆ 7.00 ಗಂಟೆ ಸಮಯದಲ್ಲಿ, ಪೊಲೀಸರು ನಮ್ಮ ಆಸ್ಪತ್ರೆಗೆ ಬಂದು ಚಾಸಾ.2 ಗಾಯಾಳುವಿನ ಹೇಳಿಕೆಯನ್ನು ಪಡೆದಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ, ಪೊಲೀಸರು ನಮ್ಮ ಆಸ್ಪತ್ರೆಗೆ ಬಂದು ಚಾಸಾ.2 ಗಾಯಾಳುವಿನ ಹೇಳಿಕೆಯನ್ನು ತೆಗೆದುಕೊಂಡಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.2 ಗಾಯಾಳುವಿಗೆ ಆಗಿದ್ದ ಗಾಯಗಳಿಗೆ, ಚಿಕಿತ್ಸೆಯನ್ನು ಮಂಡ್ಯ ಅಥವಾ ಮೈಸೂರು ಆಸ್ಪತ್ರೆಯಲ್ಲಿಯೂ ಸಹ ಪಡೆದುಕೊಳ್ಳಬಹುದಿತ್ತು ಎಂದರೆ ಸರಿ. ಪೊಲೀಸರು ನಮ್ಮ ಆಸ್ಪತ್ರೆಗೆ ಯಾವುದೇ ಕೋರಿಕೆ ಪತ್ರವನ್ನು ಕೊಟ್ಟಿರಲಿಲ್ಲ ಹಾಗೂ ನಿಪಿ.22 ಹೇಳಿಕೆಯನ್ನು ನಾವೇ ಸೃಷ್ಟಿ ಮಾಡಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಚಾಸಾ.2 ಗಾಯಾಳು-ಸತೀಶ್ ನಮ್ಮ ಆಸ್ಪತ್ರೆಯಲ್ಲಿ ಏನು ಹೇಳಿಕೆಯನ್ನು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.ಚಾಸಾ.2 ಗಾಯಾಳು-ಸತೀಶ್ ರವರ ಹೇಳಿಕೆಯನ್ನು ನಮ್ಮ ಆಸ್ಪತ್ರೆಯ ಅಸಿಸ್ಟೆಂಟ್ ರವರ ಸಮ್ಮುಖದಲ್ಲಿ ದಾಖಲಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಕೇಸಿಗೋಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.